ಉಪಾಧ್ಯಕ್ಷರು.—ಪ್ರಶ್ನೆ ಕೇಳಿ.

ಶ್ರೀ ಶಿವಾನಂದ ಹೆಚ್. ಕೌಜಲಗಿ.—ಇಂಥ ತಪ್ಪು ಮಾಹಿತಿ ಕೊಟ್ಟಂಥ ಅಧಿಕಾರಿಗಳ ಮೇಲೆ ಮಾನ್ಯ ಮಂತ್ರಿಗಳು ಯಾವ ಪ್ರಕಾರವಾಗಿ ಕ್ರಮವನ್ನು ಕೈಗೊಳ್ಳುತ್ತಾರೆ ? ಅಲ್ಲಿನ ಸಾರ್ವಜನಿಕರಿಂದ ಮನವಿಗಳು ಬಂದರೆ ಅಲ್ಲಿ ಒಂದು ಖಾದಿ ಕೇಂದ್ರವನ್ನು ತೆರೆಯಲಾಗುವುದೇ ?

ಶ್ರೀ ಎಂ. ರಘುಪತಿ.—ನನ್ನ ಉತ್ತರ ಇಷ್ಟೆ. ಚಚ್ಚಡಿ ಗ್ರಾಮದಲ್ಲಿ ಒಂದು ಖಾದಿ ಕೇಂದ್ರವನ್ನು ಸ್ಥಾಪನೆ ಮಾಡಬೇಕು ಎಂದು ಹೇಳಿದ್ದಾರೆ. ಆದಕ್ಕೆ ಅವರು ಈಗ ಯಾವುದಾದರೂ ಒಂದು ಸಂಸ್ಥೆಯಲ್ಲಿ ಅದರ ಬಗ್ಗೆ ನೋಂದಾಯಿಸಿಕೊಂಡರೆ ಆ ಸಂಸ್ಥೆಗಳ ಮೂಲಕ ತತ್‌ಕ್ಷಣ ಏರ್ಪಾಡು ಮಾಡುತ್ತೇನೆಂದು ಹೇಳುತ್ತೇನೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ.—ಇನ್ನೊಂದು ಪ್ರಶ್ನೆಯನ್ನು ಕೇಳಿದ್ದೇನೆ, ಅದರಲ್ಲಿ ಏನು ಪ್ರಶ್ನೆ ಎಂದರೆ ''ಬೆಳಗಾಂ ಜಿಲ್ಲೆಯಲ್ಲಿ'' ಅಲ್ಲಲ್ಲಿ ಅಂಬರ ಚರಕ ಕೇಂದ್ರಗಳನ್ನು ತೆರೆಯಲು ಸಾರ್ವಜನಿಕರು ಮುಂದೆ ಬಂದರೂ ಕೂಡಾ ಅಧಿಕಾರಿಗಳು ಸಹಕರಿಸುತ್ತಿಲ್ಲ ಎಂಬುದು ನಿಜವೇ ಎಂಬ ಪ್ರಶ್ನೆಗೆ ಈ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ಉತ್ತರದಲ್ಲಿ ಹೇಳಿದ್ದಾರೆ. ಅಲ್ಲಿ ಕೆಲವೊಂದು ಅಧಿಕಾರಿಗಳು ಇದ್ದಾರೆ, ಅವರು ಒಂದು ರೀತಿಯಲ್ಲಿ ಚೈನ್ ಇದ್ದಹಾಗೆ. ಯಾರಾದರೂ ಈ ರೀತಿ ಖಾದಿ ಕೇಂದ್ರಗಳನ್ನು ತೆಗೆಯಬೇಕು ಎಂದು ಹೇಳಿದರೆ ಅದಕ್ಕೆ ಆ ಅಧಿಕಾರಿಗಳು ಅದನ್ನು ಮಾಡುವುದಕ್ಕೆ ಬಿಡುವುದಿಲ್ಲ. ಖಾದಿ ಗ್ರಾಮೋದ್ಯೋಗ ತೆಗೆಯಲಿಕ್ಕೆ ಸೆಂಟ್ರಲ್ ಗೌರ್ನಮೆಂಟ್‌ನಿಂದ ಫಂಡ್ಸ್ ಬರುತ್ತದೆ ಎಂದು ಹೇಳಿದ್ದಾರೆ. ಆ ಅಧಿಕಾರಿಗಳ ಹೆಸರನ್ನು ಇಲ್ಲಿ ಹೇಳಬಾರದು. ಸೋಮಶೇಖರ್ ಎಂಬ ಒಬ್ಬ ಕೆ. ಎ. ಎಸ್. ಅಧಿಕಾರಿ ಇದ್ದಾರೆ, ಅವರು ಒಂದು ರೀತಿಯಲ್ಲಿ ಚೈನ್ ಇದ್ದಹಾಗೆ. ಖಾದಿ ಗ್ರಾಮೋದ್ಯೋಗ ನಮ್ಮಲ್ಲಿ ಬಾರದ ಹಾಗೆ ಅವರು ಮಾಡಿದ್ದಾರೆ. ಆದ್ದರಿಂದ ಮಾನ್ಯ ಮಂತ್ರಿಗಳು ಇದರ ಬಗ್ಗೆ ವಿಚಾರ ಮಾಡಿ ಗ್ರಾಮಾಣ ಪ್ರದೇಶದಲ್ಲಿ ಖಾದಿ ಕೇಂದ್ರಗಳನ್ನೆ ತೆಗೆಯಲಿಕ್ಕೆ ಅನುಕೂಲ ಮಾಡಿಕೊಡಬೇಕು ಎಂದು ನಾನು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ರಘುಪತಿ.—ಖಾದಿ ಆಯೋಗದ ನಿಯಮಾವಳಿಗಳ ಪ್ರಕಾರ ಗ್ರಾಮಾಂತರ ಪ್ರದೇಶದಲ್ಲಿ ಹೆಚ್ಚು ಹೆಚ್ಚಿನ ಖಾದಿ ಕೇಂದ್ರಗಳನ್ನು ಸ್ಥಾಪನೆ ಮಾಡಬೇಕು ಎನ್ನುವುದೇ ನಮ್ಮ ಉದ್ದೇಶವಾಗಿದೆ, ಇದಕ್ಕೆ ಅಂತ ಯಾವುದಾದರೂ ಅಡಚಣೆ ಬಂದರೆ ಮಾನ್ಯ ಶಾಸಕರು ನನ್ನ ಗಮನಕ್ಕೆ ತಂದರೆ ನಾವು ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ ಮತ್ತು ಅದನ್ನು ಸರಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ ಎಂದು ಹೇಳುತ್ತೇನೆ. ಇನ್ನು ಅಧಿಕಾರಿಗಳ ಬಗ್ಗೆ ಏನು ಹೇಳಿದ್ದಾರೆ, ಅಂಥಾದ್ದು ಏನಾದರೂ ಇದ್ದರೆ. ನನಗೆ ಅದನ್ನು ಅವರು ಬರೆದು ಕಳುಹಿಸಿದರೆ ನಾನು ವಿಚಾರಣೆ ಮಾಡಿಸುತ್ತೇನೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ.—ಅಸೆಂಬ್ಲಿಯಲ್ಲಿ ಓಪನ್ ಆಗಿ ಹೆಸರನ್ನು ಹೇಳಿದರೂ ಸಹ ಮತ್ತೆ ಏತಕ್ಕೆ ಅದನ್ನು ಬರೆದು ಕಳುಹಿಸಬೇಕು ?

ಕರ್ನಾಟಕದಲ್ಲಿ ಕೆ.ಇ.ಬಿ.ಗೆ ಕಾರ್ಖಾನೆಗಳಿಂದ ಬರಬೇಕಾದ ಬಾಕಿ ಹಣದ ವಿವರ ಕುರಿತಂ

884 (2713) ಶ್ರೀ ಗೋಪಾಲ ಮುಕುಂದ ಕಾನಡೆ (ಖಸಿ).—ಮಾನ್ಯ ವಿದ್ಯುತ್ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ರಾಜ್ಯದ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಗೆ ಒಂದು ಲಕ್ಷ ರೂ.ಗಳಿಗಿಂತ ಹೆಚ್ಚಿಗೆ ಹಣ ತುಂಬಬೇಕಾದ ಖಾಸಗೀ ಉದ್ದಿಮೆಗಳು ಯಾವುವು ?(ಹೆಸರು ಹಾಗೂ ಹಣದ ವಿವರ ನೀಡುವುದು)

ಆ) ಸದರಿ ಉದ್ದಿಮೆಗಳು ಬಾಕಿ ಇಟ್ಟುಕೊಂಡಿರುವ ಹಣವೆಷ್ಟು (ಹೆಸರು, ಎಷ್ಟು ವರ್ಷದಿಂದ ಬಾಕಿ ಇರುವುದು ವಿವರ ನೀಡುವುದು)•

ಇ) ಈ ಉದ್ದಿಮೆದಾರರಿಗೆ ನೀಡುವ ವಿದ್ಯುತ್‌ನಲ್ಲಿ ಯೂನಿಟ್‌ಗೆ ವಿಧಿಸಿದ ಮತ್ತು ವಸೂಲಿ ಮಾಡುತ್ತಿದ್ದ ಹಣವೆಷ್ಟು? (ಉದ್ಯಮಾವಾರು ವಿವರ ನೀಡುವುದು)

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಮಂತ್ರಿಗಳು).—

ಅ) 30-9-87ರವರೆಗೆ ಒಂದು ಲಕ್ಷಕ್ಕೂ ಮೀರಿದಂತೆ ಬಾಕಿ ಉಳಿಸಿಕೊಂಡಿದ್ದ ಉದ್ದಿಮೆಗಳ ಹೆಸರನ್ನು ಅನುಬಂಧದಲ್ಲಿ ನೀಡಿದೆ.

ಆ) ವಿವರ ಅನುಬಂಧದಲ್ಲಿ ನೀಡಿದೆ.

ಇ) ಈ ಉದ್ದಿಮೆಗಳಿಗೆ ಅನ್ವಯವಾಗುವ ವಿದ್ಯುತ್ ಶುಲ್ಕ (ಟ್ಯಾರಿಫ್)ನ್ನು ಅನುಬಂಧದಲ್ಲಿ ನೀಡಲಾಗಿದೆ.

ಹೆಚ್.ಟಿ.—2ರಂತೆ ಡಿಮ್ಯಾಂಡ್ ದರ ಕೆ.ವಿ.ಎ.ಗೆ 40 ರೂ.ಗಳು ಮತ್ತು ವಿದ್ಯುತ್ ಬಳಕೆ ದರ ಪ್ರತಿ ಯೂನಿಟ್‌ಗೂ 80 ಪೈಸೆಗಳು.

ಎಲ್.ಟಿ. 5(ಬಿ) ರಂತೆ ನಿಗದಿತ ಶುಲ್ಕ ಅಶ್ವಶಕ್ತಿಯೊಂದಕ್ಕೆ 6 ರೂ.ಗಳು ಮತ್ತು ಬಳಕೆ ಬಾಬ್ತು ಹಣ ಯೂನಿಟ್ ಒಂದಕ್ಕೆ 90 ಪೈಸೆಗಳು.

Names of the Private Industries which are due to Karnataka Electricity Board more than Rs. one lakh as on 30-9-1987.

Sl. No.	R.R. No.	Name of the consumer and Address	Arrears as on 30-9-87 (Rs. one lakh and above)
1	2	3	4
	EAST DVN.		Rs. Ps.
1	E 4 HT 46	M/s Andra Steel	44,29,069.00
2	E 4 HT 82	United Wines & Allied Ind.	2,87,714.90
3	E 4 HT 60	M/s V.K. Boards & Papers	1,62,148.40
4	E 4 HT 78	Tikmoni Steel Co.	42,48,458.40
5	E 4 HT 43	M/s Ferrities Electronic Component	2,14,235.50
6	E 4 HT 81	M/s Kap Steels	14,12,000.00
	WEST DVN.		
1	AP 5737 & AP 103	A.S. Prabhavathi	1,35,937.27
2	107/P2	P.M. Abdul Basha	1,40,037.80
3	—	Magadi Dhandusa	1,51,921.35
4	W3 HT 2/P1	M/s Minerva Mills	11,04,759.69
5	W2 HT 8/P1	M/s Processing Mills	1,91,230.16
6	W3 P 464/P2	Vinda Udyog	1,36,839.80
7	W3 P 1330/P2/639	Babulal Khotari	1 16,539.00
8	W3 P 1073/P4	do	2,44,996.00
9	W3 P 1049/P4	do	3,00,104.00
10	W3 P 464/P2	Basanthkumar Bachalu	1,13,862.00
11	W3 P 1396/p1/14/685	Charidevi Sipani	4,75,260.00
12	—	do	1,64,870.00
13	W3 P 660	Ananda Raj	1,23,801.00

1	2	3	4
14	W3 Pl 941/A	Plasto Moulds	1,27,166.00
15	W3 P 473	Ahamadulla Khan	1,83,270.00
16	W3 44863	V. Ramadas Ballal	3,67,113.00
	NORTH DVN.		
17	NSP 974/82/76	G. Rama Rao	1,70,825.50
18	W6P 199	Sri Krishna Eng. Works	1,56,811.70
19	W10 HT 76	Yogendra Eng. Entprs.	3,02,765.86
20	W10 HT 8	Bhanu Oil Complex	1,35,851.59
	SOUTH DVN.		
21	SHT 2	M/s Krishna Spin Tex (P) Ltd.,	1,19,115.00
22	IEP 892	M/s Madhu Soodhan Textile	2,07,379.60
23	CP 563	Srinivasa Refreshment	2,18,057.33
24	S5P 539	M/s Indo American Highbreed seeds	1,30,381.70
			48,858.90
	RURAL NORTH		
25	BHTP 1	M/s Doddaballapur Spn. Mill Ltd.	1,09,716.00
26	THTP 5	M/s S & S Rushings (P) Ltd.	14,93,377.00
27	THTP 12	M/s Power Flow Ltd.	2,71,543.80
28	HGHTP 3	M/s Karnataka Khovadar Sugar	3,30,136.63
29	E4 HT 21	M/s Bharath Steel Re-Rolling Mills	2,08,148.00
30	ESHT 15	M/s Nair Forgious (P) Ltd.	1,34,101.70
31	ESHT 23	M/s International	5,86 433.70

1	2	3	4
	RURAL SOUTH		
32	AKIHT 28	M/s Allied Carbid Ltd.	8,78,855.98
33	SSHT 3	M/s Jayramdas Udyog Ltd.	2,22,425.60
34	SSHT 24	M/s Annapurna Paper Mills (P) Ltd.	1,28,890.50
35	AKIHT 21	M/s Karnataka Pressure Vessels	2,64,173.49
36	SSHT 36	M/s Pandyan Biscut (P) Ltd.	4,82,400.00
37	AKIHT 23	M/s Inter Model Transport Technology	3,94,165.73
38	AKIHT 30	M/s Digvijaya Biscuits (P) Ltd.	3,26,171.31
39	SSHT 19	M/s Karnataka Steel Wire Products	27,42,889.80
40	W2P 86	M/s Azad Coach Builders (P) Ltd.	2,52,037.00
	CENTRAL DVN.		
41	W11 HT2/4	K.V. Narayana Rao & Bros	1,52,106.00
42	W 8 HTS /C1/12	Mysore Spinning Mfg. Mills	8,90,617.00
	TUMKUR DVN.		
43	KHT 1	Mysore Cements Ltd.	1,73,71,214.17
44	AHT 2	do	81,81,373.80
45	THT 18	Chamundi Moped Ltd.	5,41,662.70
46	KGHTP 3	M/s Manuylux Paper (P) Ltd.	2,79,656.44
47	AP 88	Genl. Manager Mini Paper Mill	1,51,251.80
	CHICKKABALLAPUR DVN.		
48	GRHT 3	M/s Gowri Indst.	4,26,667.33
	K.G.F.		
49	HT 14	Suresh Chandra Gupta	1,09,775.20

1	2	3	4
	SHIMOGA DIVISION		
50	HIH TPI	M/s Bandur Sugar Works —	2,44,727.32
51	KDH TPI	B.L. Kalachari M/s Dhancelakshvi Khandasari work	1,74,525.05
52	H3	M/s Vasantha Ind.	5,36,323.97
	SAGAR DIVISION		
53	HTP 22	M/s R.N. Shetty & Co.,	2,17,110.05 6,605.25
54	HTP 23	do	1,85,281.86 3,830.14
55	HTP 36	do	1,35,369.15 3,033.05
	MANGALORE DIVISION		
56	HT 7	M/s MCF pa	1,53,55,356.50 49,600.00
57	HT 11	M/s Patil Dyeo & Chemical Ltd,	2,36,494.62
58	KHTP 1	M/s Allied Ind. & Steel Rolling Mills	2,20,739.08
59	HT 50	M/s Mazgon Dock Ltd., Hotel Suman Saul & Bittal	8,04,102.30
60		Hotel Suman Soul & Bihal	7,03,362.35
61	MUK 65	M. Padmaraj Padival	1,20,911.11
	UDUPI DIVISION		
62	VDR 388	M/s Udayawar Ice Factory	1,10,452.98
63	CSI/86	M/s Canara Ice Plant	1,43,793.98

	CAD MYSORE		
64	HT 17	M/s K.R. Mills	2,52,630.95
			42,83,896.55
			11,30,900.00
65	HT 94	Rano (Madras)	2,50,367.30
66	HT 46	Vishnu Forge	6 47,512.00
67	HT 58	Deep Oxigeon Co.,	11,208.20
			1,54,047.60
			4,44,915.00
68	HT 112	Venlon Polister	3,41,085.40
69	NHT 13/14	Pantape Magenets	2,81,784.00
70	NHT 6/14	Kabani Paper Mills	5,14,899.00
71	P 29/14	A.N. Ajeth Kumar	2,69,349.20
72	HT 45	M/s Shimoga Steels Ltd.	35,23,128.30
73	HT 90	Channakeshava Khaudasari	7,864.90
			1,50,041.00
74	NHT 7/14	M/s Rajsheek Paper Mills	6,17 135.40
	RADI MYSORE		
75	SYH 1	M/s Udrapaid Ltd.	36,21,644.30
76	SYHT 2	M/s Kaveri Paper Mills	5,76,381,90
77	CHT	M/s Mahaveera Khaudasari	1,94,943.81
	MANDYA DIVISION		
78	HT 13 & 14	MCF Belgala	10,12,349.60
79	HTP 1	Heuca Khaudasari Sugar Factory	1,91,795.60

1	2	3	4
	HASSAN DIVISION		
80	HSP 558	M/s Lakshmi Sugar Jagari Works	1,43,620.30
81	HTP 1	M/s Vijaya Khaudasari Sugar Works	1,99,207.40
	HUBLI DIVISION		
82	HT 36	Karnataka Steel	1,52,602.50
83	HT 38	Ferro Concrete Co. of India	1,63,054.20
84	A & TMP 3	Granit 83	1,71,092.50
85	HT 3	Modern Mills	12,40,181.20
	SIRSI DIVISION		
86	EHT 1	M/s Ballapur Ind. Ltd.	56,81860.01
87	HT 1	M/s Dhandeli Ferro Alloys Ltd.	1,77,20,521.40
88	HT 27	M/s Ravi Reddy & Co.,	2,07,468.25
	CHITRADURGA DIVISION		
89	KPCI HT 4	M/s Kapil Cement Ind.	1,76,521.46
90	H 1	V.V. Sugar Factory	1,21,093.90
	DAVANAGERE DIVISION		
91	P 67	M/s Ganeoar Textile	26,95,183.20
92	P 228	Siddeshwara Taxtile	24,09,543.00
93	P 70	Shankar Textile	2,88,004.50
94	P 17	M/s B.T. Pvt. Ltd.,	5,65,173.10
95	P 321	M/s Chigateri Mills Ltd.,	23,15,181.90
	HAVERI DIVISION		
96	RNRP 5	M/s Raud Rolling Mill	2,22,936.02
97	KHBHT 1	Hindustan Board Factory	1,89,792.30

1	2	3	4
	GADAG DIVISION		
98	HT 6	B.K. Abbigeri	1,28,674.47
99	HT 13	Rajarajeshwari Winding Works	2,07,289.00
	BELGAUM DVN.		
100	HTS 4	Hind Steel	1,59,988.80
101	HT 5	M/s Talnkikar combides (p) Ltd.	2,60,168.40
102	HTS 5	M/s Indal	3,28,11,337.62
103	HTS 21	Belgaum Roller Floor Mill	2,87,342.00
104	BGMMP 63	M/s Pavas Enterprises	1,90,685.50
105	BGM 56	Hotel Kaudar	1,75,537.30
106	HTS 26	Ashok Iron Works	1,33,526.67
107	HTS 8	Arati Theater	1,94,740.00
	BAGALKOT DVN.		
108	HT 6	Bagalkot Co.op. Spinning Mill	8,96,573.64
109	HT 2	Bagalkot Udyog Ltd.	21,83,040.98
	BIJAPUR DVN.		
110	HT 5	M/s Mysore Cotton Seeds	7,64,040.80
	JAMKHANDI DVN.		
111	HT 2	Jakanur Jaggari Ltd.	1,33,171.75
112	JMHT 1	M/s Godavari Sugar Mills	1,36,939.87
113 & 114	GKK 5930	M/s Siddalingeshwar Cotton & Oil Mill	1,15,726.70

1	2	3	4
	BELLARY DVN.		
115 & 116	HT 5	M/s Bellary Spinning & Weaving Co.,	3,19,507.30
117	HT 11	M/s Navakarnataka Steels (P) Ltd.	1,99,101.52
118	EHT 1	M/s Pauuyaeu Cements & Meuinal Ind.	61,36,797.20
119	VHT 2	M/s Smiore (P) Ltd.	62,35,729.65
			23,34,595.90
120	VHT 3	M/s Smiore (P) Ltd.	15,40,865.89
			91,60,992.40
121	KRGHT 2	M/s Saroj Allois Steel Ltd.	2,45,212.71
122	BHT 3	M/s Smiore (P) Ltd.	3.20,29,046.28
	BELLARY II		
123	SH 6	M/s Jagadamba Khande Sai Sugar	1,32,711.30
	RAICHUR DVN.		
124	HTR 31	M/s Gangadareswara Oil Mill	1,14,714.90
125	HTM 1	Adm. TAPCMC Manvi Ginning Processing Factory	4,13,064.50
	GANGAVATHI DVN.		
126	HT 7	M/s Gangavathi Sugar Ltd.	2,21,843.60
127	MHT 1	M/s Salerjug Sugar Mills Ltd.	6,59,082.88
128	MHT 9	M/s Munirabad Drug Co.,	1,01,829.90
129	MHT 14	M/s Tungabhadra Fibrs Ltd.	1,31,90,152.70
130	MHT 2	M/s Chamundi Chemicals & Fertilizers Ltd.	1,04,525.74
131	MHTP 1	M/s Hanuman Packing Corporation Ltd.	1,09,907.00

	GULBARGA DVN.		
132	MRTHT 1	M/s Karnataka Instractarrcher (P) Ltd.	2,68,350.25
133	SH BDHT 1	M/s ABL Work Sahahabad	1,37,371.29
134	SH BDHT 2	M/s ACC Cement Works	32,38,428 01
			89,840.00
135	DHFHT 2	do Indi	6,67,552.14
			8,68,457.70
136	MDRHT 1	Shree Shankor Cement (P) Ltd.	1,91,008.80
137	HT 2	M/s Balaji Khadambari Sugar	3,67,868.20
138	GHTP 3	M/s Gopal Oil Mills	1,09,401.51
139	HT 1	M/s Chincholi Khandasari	4,00,017.70
	YADGIR DVN.		
140	HTP 3	Viswanath Reddy Mudnol	1,31,037.29
141	HT 1	Bangalore Cements	2,44,819.68
142	HT 12	Amreswar Cements	2,63,232.95
143	HT 1	C.C.I. Kurkuntr	10,02,049.27
144	HTP 4	Vasavadatta Cement	3,96,906.00
	BIDAR DVN.		
145	HT 20	M/s Bidar Alloy Indi	3,41,878.10
146	HT 14	M/s Tirupati KSF	1,76,973.69
147	HT 1	M/s Syantdi	2,32,192.67
148	MEHT 1	Vokateswar KSF	5,01,201.30
			67,634.30
149	BRHTI	M/s Shivashakti Sugar Mill	2,04,030.00
150	CTPHT 2	M/s Radhskrishna Khandasari	1,09,009.30
		Total	26,76,83,382.80

ಶ್ರೀ ಗೋಪಾಲ ಮುಕುಂದ ಕಾನಡೆ.—ನೀವು ಉತ್ತರವನ್ನು ಕನ್ನಡದಲ್ಲಿ ಕೊಟ್ಟಿಲ್ಲ, ವಿವರ ಎರಡನೇ ಪುಟದಲ್ಲಿ ಇದೆ ಎಂದು ಹೇಳಿದ್ದೀರಿ, ಆದರೆ ಅದು ಇಂಗ್ಲೀಷ್‌ನಲ್ಲಿದೆ, ದಯವಿಟ್ಟು ಅದನ್ನು ತಾವೇ ಓದಿ ಹೇಳಬೇಕು.

ಶ್ರೀ ಲಕ್ಷ್ಮೀನರಸಿಂಹಯ್ಯ.—ಕನ್ನಡದಲ್ಲಿ ಟೈಪ್ ಮಾಡಿಸಿ ಮಾನ್ಯ ಸದಸ್ಯರಿಗೆ ಕಳಿಸಿಕೊಡುತ್ತೇನೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ಹಾಗಾದರೆ ಈಗ ಇದನ್ನು ಓದಿ ಹೇಳಬೇಕು, ಇದು ವೆರಿ ಇಂಪರ್ಟಾಂಟ್.

ಉಪಾಧ್ಯಕ್ಷರು.—ಅಕಸ್ಮಾತ್ತಾಗಿ ಬಂದಿದೆ, ಪ್ರಶ್ನೆ ಕೇಳಿ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಜಿಲ್ಲಾವಾರು ಲಿಸ್ಟ್ ಕೇಳಿದ್ದಾರೆ, ಈಗ ಅಷ್ಟನ್ನೂ ಓದಿ ಹೇಳುವುದು ಕಷ್ಟವಾಗುತ್ತದೆ.

ಶ್ರೀ ಗೋಪಾಲ ಮುಕುಂದ ಕಾನಡೆ.—೧೦ ಲಕ್ಷ ರೂಪಾಯಿಗೂ ಹೆಚ್ಚು ಕೆ. ಇ. ಬಿ. ಗೆ ಬಾಕಿ ಕೊಡಬೇಕಾದ ಕಾರ್ಖಾನೆಯ ಹೆಸರು ಹೇಳಿ. ನಿಮಗೆ ಒಂದು ಲಕ್ಷ ಎರಡು ಲಕ್ಷ ಹೇಳಲು ಬೇಜಾರಾದರೆ ೧೦ ಲಕ್ಷಕ್ಕೂ ಮೇಲ್ಪಟ್ಟ ಕಾರ್ಖಾನೆಗಳ ಹೆಸರುಗಳನ್ನು ಮಾತ್ರ ಹೇಳಿ. ನಾವು ಯಾಕೆ ಹೇಳಬೇಕು, ನೀವು ಹೇಳಿ.

ಶ್ರೀ ಲಕ್ಷ್ಮೀನರಸಿಂಹಯ್ಯ.—೪೦-೫೦ ಲಕ್ಷಕ್ಕಿಂತ ಹೆಚ್ಚು ಕನ್‌ಸೂಮರ್ಸ್ ಇರುವ ಕಡೆ ಓದಿ ಹೇಳಿ ಎಂದರೆ ಹೇಗೆ ?

ಉಪಾಧ್ಯಕ್ಷರು.—ತಾವು ಪ್ರಶ್ನೆ ಕೇಳಿ.

ಶ್ರೀ ಗೋಪಾಲ ಮುಕುಂದ ಕಾನಡೆ.—೧೦ ಲಕ್ಷಕ್ಕೂ ಮೇಲ್ಪಟ್ಟು ಬಾಕಿ ಇರುವ ಕಾರ್ಖಾನೆಗಳ ಹೆಸರು ಹೇಳುವುದಕ್ಕೆ ಯಾಕೆ ಇವರು ಹೆದರುತ್ತಿದ್ದಾರೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಅದು ಸೀಕ್ರೆಟ್ ಡಾಕ್ಯುಮೆಂಟ್ ಅಲ್ಲ.

ಶ್ರೀ ಗೋಪಾಲ ಮುಕುಂದ ಕಾನಡೆ.—೫ ರೂಪಾಯಿ ಒಬ್ಬ ಬಡವ ಬಾಕಿ ಕೊಡದಿದ್ದರೆ ಇವರು ಫ್ಯೂಸ್ ಕಟ್ ಮಾಡುತ್ತಾರೆ. ನನ್ನ ಪ್ರಶ್ನೆ ಇಷ್ಟೇ, ಬಡಪರಿಗೂ ಕೋಟ್ಯಾಧೀಶರಿಗೂ ವ್ಯತ್ಯಾಸ ಏಕೆ ಮಾಡಬೇಕು ?

ಉಪಾಧ್ಯಕ್ಷರು.—ಆ ಪ್ರಶ್ನೆ ಬೇಡ.

ಶ್ರೀ ಗೋಪಾಲ ಮುಕುಂದ ಕಾನಡೆ.—ನಾನು ಕೇಳುವುದು ೧೦ ಲಕ್ಷಕ್ಕೂ ಹೆಚ್ಚು ಕೆ. ಇ. ಬಿ.ಗೆ ಕರೆಂಟ್ ಬಾಬ್ತು ಬಾಕಿ ಕೊಡಬೇಕಾದವರ ಹೆಸರು ಹೇಳಿ ಎಂದು ?

ಶ್ರೀ ಲಕ್ಷ್ಮೀನರಸಿಂಹಯ್ಯ.—ಹೆಸರುಗಳನ್ನು ಒದಗಿಸುವುದಕ್ಕೆ ತೊಂದರೆ ಇಲ್ಲ. ಟಾಟ್ ಸ್ಪಾಂಡಿಂಗ್ ೪೦ ಲಕ್ಷ, ೪೨ ಲಕ್ಷ೫೦ ಲಕ್ಷ ಇದೆ. ಹೆಸರುಗಳನ್ನು ಹೇಳುವುದಾದರೆ ಆಂಧ್ರ ಸ್ಟೀಲ್ ೪೪,೨೯,೦೬-೫೦, ಕ್ಯಾಪ್ ಸ್ಟೀಲ್ಸ್ ೧೪,೧೨,೦೦೦-೦೦, ಮಿನರ್ವ ಮಿಲ್ಸ್ ೧೧ ಲಕ್ಷ. ಟಿಸ್ಕೋನಿ ಸ್ಟೀಲ್ ೪೨ ಲಕ್ಷ. ವಿ. ಎಸ್. ಐ.ಎಲ್. ೭೮ ಲಕ್ಷ...

ಶ್ರೀ ಗೋಪಾಲ ಮುಕುಂದ ಕಾನಡೆ.—ಕೋಟಿ ಬಾಕಿ ಇದೆಯಲ್ಲಾ ಅವರ ಹೆಸರು ಹೇಳಿ.

ಉಪಾಧ್ಯಕ್ಷರು.—ಪ್ರಶ್ನೋತ್ತರ ಕಾಲದಲ್ಲಿ ಹೀಗೆ ವಿವರಗಳನ್ನು ಹೇಳುವುದು ಕಷ್ಟ. ಅರ್ಧ ಗಂಟೆ ಚರ್ಚೆಗೆ ಬೇಕಾದರೆ ನೋಟೀಸ್ ಕೊಡಿ, ಅವಕಾಶ ಕೊಡೋಣ.

ಶ್ರೀ ಗೋಪಾಲ ಮುಕುಂದ ಕಾನಡೆ.—ಅರ್ಧ ಗಂಟೆಗೆ ಚರ್ಚೆಗೆ ಬಂದು ಹೋಗಿದೆ,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಸದಸ್ಯರು ಕೇಳುವುದು ಸದನಕ್ಕೆ ಗೊತ್ತಾಗಬೇಕು. ಎಷ್ಟು ಆರಿಯರ್ಸ್ ಇವೊತ್ತಿನ ದಿವಸ ಕೆ. ಇ. ಬಿ. ಯಿಂದ ಬರತಕ್ಕದ್ದು ಉಳಿದಿದೆ, ಮತ್ತು ಯಾರ್ಯಾರು ಇದ್ದಾರೆ ಎಂಬುದು ಹೊರ ಬರಲಿ. ಯಾಕೆಂದರೆ ಅವರು ಕೇಳತಕ್ಕದ್ದು ಚಿಲ್ಲರೆ ಅಲ್ಲ. ಒಂದು ಲಕ್ಷ, ಎರಡು ಲಕ್ಷ, ಅಲ್ಲ ೧೦ ಲಕ್ಷ ರೂಪಾಯಿಗೆ ಮೇಲ್ಪಟ್ಟ ಅರಿಯರ್ಸ್ ಹೋಲ್ಡರ್ಸ್

ಯಾರು ಇದ್ದಾರೆ, ಅವರ ಹೆಸರು ಹೇಳಿ ಎಂದು ಕೇಳುತ್ತಿದ್ದಾರೆ. ಅದು ಇಲ್ಲದಿದ್ದರೆ ಕೋಟಿಗಟ್ಟಲೆ ಇದೆಯಲ್ಲಾ, ಅವರದ್ದು ಹೇಳಿ, ಯಾಕೆಂದರೆ ಇದು ಜನರಿಗೆ ಗೊತ್ತಾಗಲಿ. ಇಂತಹ ಕೆ ವು ಇನ್‌ಸ್ಟಿಟ್ಯೂಶನ್‌ವರು ಇವೊತ್ತಿನ ದಿವಸ ಕೋಟ್ಯಾಂತರ ರೂಪಾಯಿಗಳು ಸರ್ಕಾರದ ಮೇಲೆ ಬಾಕಿ ಇಟ್ಟುಕೊಂಡು ತಪ್ಪಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದಾರೆ, ಅದು ತಮಗೆ ಗೊತ್ತಿರಬಹುದು. ಬಾಕಿ ಕ್ಲಿಯರ್ ಮಾಡಿದರವ. ಇಂಟರೆಸ್ಟ್ ದುಡ್ಡು ಅನೇಕ ಜನ ಬಾಕಿ ಕೊಡುವುದಿಲ್ಲ. ಗವರ್ನ ಮೆಂಟ್‌ಗೆ ಕೊಡುವುದು ಉಳಿಯುತ್ತದೆ. ಯಾರು ಇನ್‌ಫ್ಲುಯೆನ್ಸ್ ಮೇಲೆ ಅರಿಯರ್ಸ್ ಇಟ್ಟು ಕೊಂಡಿದ್ದಾರೆ, ಅವರಿಗೆ ಕೊಡತಕ್ಕ ತಾಕತ್ತು ಇದ್ದರೂ ಕೊಡುತ್ತಾ ಇಲ್ಲವೋ, ಅಥವಾ ಫ್ಯಾಕ್ಟರಿ ಲಾಸ್ ಇದೆ ಎಂದು ಕೊಡುತ್ತಾ ಇಲ್ಲವೋ ಅದು ತಿಳಿಯಲಿ.

ಶ್ರೀ ಲಕ್ಷ್ಮೀನರಸಿಂಹಯ್ಯ.—ತಾವು ತಪ್ಪು ಅರ್ಥ ಬರುವ ರೀತಿಯಲ್ಲಿ ಮಾತನಾಡುತ್ತಿದ್ದೀರಿ. ಬಾಕಿ ಬಿಟ್ಟಿರುವುದೆಲ್ಲಾ ಕೋರ್ಟಿನಲ್ಲಿ ಇದೆ, ಕೆಲವು ಡಿಸ್ಪೂಟ್ಸ್ ಇದೆ. ಡಿಸ್ಪೂಟ್ಸ್ ಇದ್ದಾಗ ಅಮಿಕಬಲ್ ಸೆಟಲ್‌ಮೆಂಟ್ ಮಾಡಬೇಕಾಗುತ್ತದೆ.

ಉಪಾಧ್ಯಕ್ಷರು.—ಥರ್ಮಸಿಂಗ್ ರವರೇ, ತಾವು ಕೂಡಿ, ತಮ್ಮ ಉಪನಾಯಕರು ಮಾತನಾಡಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಪೇಮೆಂಟ್ ಅನ್ನು ಕ್ವಿಕ್ ಆಗಿ ಮಾಡಬಾರದೆಂದು ಬಹಳಷ್ಟು ಜನ ಈರೀತಿ ಮಾಡುತ್ತಾರೆ.

ಶ್ರೀ ಜೆ. ಹೆಚ್. ಪಟೇಲ್.—ಬಾಕಿ ಕೊಡತಕ್ಕದ್ದು ಪಬ್ಲಿಕ್ ಅಂಡರ್‌ಟೇಕಿಂಗ್ಸ್‌ನಲ್ಲೂ ಇದೆ, ಪ್ರೈವೇಟ್ ಕಾರ್ಖಾನೆಗಳದ್ದೂ ಇದೆ. ಬೇರೆ ಬೇರೆ ಸಣ್ಣ ಕಾರ್ಖಾನೆಯವರೂ ಇದ್ದಾರೆ. ದೊಡ್ಡ ಕಾರ್ಖಾನೆಯವರೂ ಇದ್ದಾರೆ. ಕೋಟಿಗಟ್ಟಲೆ ಬಾಕಿ ಇರುವ ಹೆಸರನ್ನು ಕೊಡಿ ಎಂದರೆ ಅದು ಸುಲಭ ಕೊಡಬಹುದು. ಈಗ ಕೊಟ್ಟಿರುವ ವಿವರ ಇಂಗ್ಲೀಷ್‌ನಲ್ಲಿದೆ, ಇದು ತಮಗೆ ಅರ್ಥವಾಗುವುದಿಲ್ಲ ಎಂದು ಅವರು ಹೇಳಿದರು. ಅಲ್ಲದೆ ಕೋಟಿಗಟ್ಟಲೆ ಬಾಕಿ ಇರುವುದನ್ನು ಇಲ್ಲಿ ವಿವರವಾಗಿ ಕೊಟ್ಟಿದ್ದೇವೆ.

ಶ್ರೀ ಥರ್ಮಸಿಂಗ್.—ಎಷ್ಟು ಇಂಡುವಿಜಯಲ್ ಕಾರ್ಖಾನೆಗಳು ಇವೆಯೆಂದು ಬಿಡಿಸಿ ಬೇಳ ಬೇಕು ? ಅದಕ್ಕೆ ಅವರು ಪ್ರಸ್ ಮಾಡುತ್ತಿದ್ದಾರೆ.

ಶ್ರೀ ಜೆ. ಹೆಚ್. ಪಟೇಲ್.—ಮೊದಲೇ ಈರೀತಿ ಪ್ರಶ್ನೆಯಾನ್ನು ಕೇಳಿದ್ದರೆ ಒಳ್ಳೆಯದಿತ್ತು. ಕೋಟ್ಯಿಗಟ್ಟಲೆ ಕೊಡುವವರು ೮-೧೦ ಜನ ಇರಬಹುದು, ಒಂದು ಲಕ್ಷಕ್ಕೂ ಮೀರಿ ಎಂದು ಪ್ರಶ್ನೆ ಕೇಳಿ ಈಗ ಮತ್ತೆ ಕೋಟಿಗಟ್ಟಲೆ ಬಾಕಿ ಇರುವವರ ವಿವರ ಕೊಡಿ ಎಂದು ಹೇಳಿದ್ದಾರೆ. ಕೋಟಿಗಟ್ಟಲೆ ಯಾರು ಇದ್ದಾರೆಂದು ಮೊದಲೇ ಕೇಳಿದ್ದರೆ ಉತ್ತರ ಕೊಡುವುದಕ್ಕೆ ನಮಗೆ ಸುಲಭ ಆಗುತ್ತಿತ್ತು. ವಿ. ಜಿ. ಎಸ್. ಎಲ್ ಸುಮಾರು ೬೦ ಕೋಟಿ ರೂಪಾಯಿ ಬಾಕಿ ಕೊಡಬೇಕಾಗಿದೆ. ಅದೇರೀತಿ

ಶ್ರೀ ಗೋಪಾಲ ಮುಕುಂದ ಕಾನಡೆ.—ಯಾಕೆ ಹೆಸರು ಹೇಳಲು ಹೆದರುತ್ತಿದ್ದೀರಿ ?

ಶ್ರೀ ಲಕ್ಷ್ಮೀನರಸಿಂಹಯ್ಯ.—ಹೆಸರನ್ನು ಹೇಳಲು ಹೆದರಬೇಕಾಗಿಲ್ಲ.

ಉಪಾಧ್ಯಕ್ಷರು.—ತಾವು ನೇರವಾಗಿ ಪ್ರಶ್ನೆ ಕೇಳಿ.

ಶ್ರೀ ಜಿ. ಎಂ. ಕಾನಡೆ.—ಬಡಪೈತ ಏನಾದರೂ ೫೦ ರೂಪಾಯಿಗಳ ಬಾಕಿ ಕಟ್ಟದಿದ್ದರೆ ಡಿಸ್‌ಕನೆಕ್ಟ್ ಮಾಡುತ್ತೀರಿ. ಅವನ ಬೆಳೆಯನ್ನು ಹಾಳು ಮಾಡುತ್ತೀರಿ ? ಆದರೆ ಕೋಟಿಗಟ್ಟಲೆ ಬಾಕಿ ಇರುವವರ ಮೇಲೆ ಯಾವ ಕ್ರಮವನ್ನೂ ತೆಗೆದುಕೊಳ್ಳುವುದಿಲ್ಲವೇಕೆ ? ಅವರಿಗೆ ರಕ್ಷಣೆ ಕೊಡಲು ಕಾರವೇನು ? ಅವರಿಂದ ತಾವು ಏನಾದರು ಮಾಮೂಲು ಪಡೆಯುತ್ತಿದ್ದೀರಾ ಹೇಗೆ ? ಶ್ರೀಮಂತರಿಗೆ ನೀವು ರಕ್ಷಣೆ ಕೊಡುತ್ತಿದ್ದೀರಿ ಎಂದು ನಾನು ಆಪಾದನೆ ಮಾಡುತ್ತಿದ್ದೇನೆ. ಕೋಟಿಗಟ್ಟಲೆ ಬಾಕಿ ಇರುವವರ ಹೆಸರನ್ನು ಇಲ್ಲಿ ಹೇಳಲು ತಾವು ಏತಕ್ಕೆ ಹೆದರುತ್ತೀರಿ ?

ಶ್ರೀ ಜೆ. ಹೆಚ್. ಪಟೇಲ್.—ಕೋಟಿಗಟ್ಟಲೆ ಬಾಕಿ ಇರುವವರೆ ಹೆಸರುಗಳನ್ನು ನಾವು ಪಬ್ಲಿಷ್ ಮಾಡುತ್ತೇವೆ, ಇಂತಹವರ ಹೆಸರುಗಳು ಇರುವ ಪಟ್ಟಿಯನ್ನು ಈ ಸದನದ ಮುಂದೆ ಇಡುತ್ತೇವೆ ಮತ್ತು ಯಾರಿಗೆ ಬೇಕಾದರೂ ಕೊಡುತ್ತೇವೆ. ಆದರೂ ಈ ರೀತಿ ಮಾನ್ಯ ಸದಸ್ಯರು ಆಪಾದನೆ ಮಾಡುವುದು ಸರಿಯಲ್ಲ, ಇದರಿಂದ ಏನೂ ಪ್ರಯೋಜನ ಆಗುವುದಿಲ್ಲ ಆದರೂ ತಾವು ಆಪಾದನೆ ಮಾಡಿದರೆ ಅದಕ್ಕೆ ಪರಿಹಾರವಾದನೆ ಬರುತ್ತದೆ ಅಷ್ಟೆ.

ಶ್ರೀ ಜಿ. ಎಂ. ಕಾನಡೆ.—ಅದನ್ನು ಜನರೇ ತೀರ್ಮಾನ ಮಾಡುತ್ತಾರೆ. ಇವರು ಬಡವರಿಗೆ ರಕ್ಷಣೆ ಕೊಡುತ್ತಿಲ್ಲ. ಆದರೆ ಶ್ರೀಮಂತರಿಗೆ ರಕ್ಷಣೆ ಕೊಡುತ್ತಿದ್ದಾರೆ. ಯಾರಿಗೆ ರಕ್ಷಣೆ ಕೊಟ್ಟಿದ್ದಾರೆಂಬ ಬಗ್ಗೆ ಇಲ್ಲಿ ಹೆಸರುಗಳನ್ನು ಹೇಳಬೇಕು ?

ಶ್ರೀ ಜೆ. ಹೆಚ್. ಪಟೇಲ್.—ನಾವು ಅದರ ಪಟ್ಟಿಯನ್ನೇ ತಮಗೆ ಕೊಟ್ಟಿದ್ದೇವೆ.

ಶ್ರೀ ಜಿ. ಎಂ. ಕಾನಡೆ.—ಆ ಪಟ್ಟಿಯನ್ನು ಕನ್ನಡದಲ್ಲಿ ಕೊಡಿ. ಇಂಪ್ಲೀಷ್‌ನಲ್ಲಿ ಏತಕ್ಕೆ ಕೊಟ್ಟಿದ್ದೀರಿ. ನೀವು ಕೋಟ್ಯಾಂತರ ರೂಪಾಯಿಗಳ ಬಾಕಿ ಇಟ್ಟುಕೊಂಡಿರುವವರಿಗೆ ರಕ್ಷಣೆ ಕೊಡುತ್ತಿದ್ದೀರಿ.

ಉಪಾಧ್ಯಕ್ಷರು.—ಇದು ಪ್ರಶ್ನೋತ್ತರ ಕಾಲ. ಆ ರೀತಿಯೆಲ್ಲಾ ತಾವು ಹೇಳಬಾರದು. ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಮಾನ್ಯ ಕಾನಡೆಯವರು ಅನಾವಶ್ಯಕವಾಗ ರೇಗುತ್ತಿದ್ದಾರೆ. ನಾವು ಬಾಕಿ ಇಟ್ಟುಕೊಂಡಿರುವವರ ಪಟ್ಟಿಯನ್ನೇ ಕೊಟ್ಟಿದ್ದೇವೆ. ನಾವು ಅವರು ಕೇಳಿರುವ ವಿವರಣೆ ಕೊಟ್ಟಿರುವುದರಿಂದ ಅವರು ಬೇಕಾದರೆ ಈ ಬಗ್ಗೆ ಪ್ರಸ್ ಕಾನ್‌ಫರೆನ್ಸ್ ಕರೆದು ಹೇಳಬಹುದು. ಇಲ್ಲಿ ಮುಚ್ಚಿಡುವುದು ಏನೂ ಇಲ್ಲ. ಈಗಾಗಲೇ ನಾನು ೧೦ ಲಕ್ಷ ೨೪೦ ಲಕ್ಷ ೫೦ ಲಕ್ಷ ಬಾಕಿ ಇಟ್ಟುಕೊಂಡಿರುವವರ ಹೆಸರುಗಳನ್ನು ಓದಿ ಹೇಳಿದ್ದೇನೆ. ಈಗ ಕೋಟಿಗಟ್ಟಲೆ ಬಾಕಿ ಇರುವವರ ಹೆಸರುಗಳನ್ನು ಹೇಳಬೇಕೆಂದು ಕೇಳುತ್ತಿದ್ದಾರೆ.

ಶ್ರೀ ಜಿ. ಎಂ. ಕಾನಡೆ.—ನನಗೆ ಕೋಟಿಗಟ್ಟಲೆ ಬಾಕಿ ಇರುವವರ ಹೆಸರುಗಳು ಬೇಕು.

ಶ್ರೀ ಲಕ್ಷ್ಮೀನರಸಿಂಹಯ್ಯ.—ಅದನ್ನು ಸಹ ಇದರಲ್ಲಿ ಕೊಟ್ಟಿದ್ದೇವೆ. ಮಾನ್ಯ ಶಾಣಪ್ಪನವರಿಗೆ ಗೊತ್ತಿರುವಂತೆ ಮೆಸರ್ಸ್ ಎ. ಬಿ. ಎಲ್. ವರ್ಕ್ಸ್, ಶದಾಬಾದ್ ಇವರದ್ದು ೧೪ ಲಕ್ಷ ರೂಪಾಯಿಗಳು ಬಾಕಿ ಇತ್ತು. ಆದ್ದರಿಂದ ನಾವು ಡಿಸ್‌ಕನೆಕ್ಟ್ ಮಾಡಿದೆವು. ಇದರಿಂದ ಅಲ್ಲಿನ ಕಾಲೋನಿ ಜನರಿಗೆ ತೊಂದರೆ ಆಗುತ್ತದೆ ಮತ್ತು ನೀರು ಸರಬರಾಜಿಗೆ ತೊಂದರೆ ಆಗುತ್ತದೆಂದು ನಮಗೆ ತಿಳಿದುಬಂದಾಗ ಮಾನವೀಯತೆ ದೃಷ್ಟಿಯಿಂದ ಅಲ್ಲಿನ ಡಿಸ್‌ಕನೆಕ್ಷನ್ನನ್ನು ನಂತರ ತೆಗೆದುಹಾಕಿದೆವು.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಸದಸ್ಯರು ವಿವರಗಳನ್ನು ಕನ್ನಡದಲ್ಲಿ ಕೊಟ್ಟಿಲ್ಲವೆಂದು ಹೇಳಿದ್ದಾರೆ. ಅದನ್ನು ನಾನು ಒಪ್ಪುತ್ತೇನೆ. ಕನ್ನಡದ ಪ್ರತಿಯನ್ನು ಅವರಿಗೆ ಒದಗಿಸುವವರೆಗೆ ಬೇಕಾದರೆ ಇದನ್ನು ತಡೆಹಿಡಿಯಬಹುದು.

ಶ್ರೀ ಜಿ. ಎಂ. ಕಾನಡೆ.—ತಾವು ಕೋಟಿಗಟ್ಟಲೆ ಬಾಕಿ ಇರುವವರ ಹೆಸರುಗಳನ್ನು ಹೇಳಲು ಏತಕ್ಕೆ ಹೆದರುತ್ತೀರಿ ?

ಶ್ರೀ ಜೆ. ಹೆಚ್. ಪಟೇಲ್.—ಇವರು ಯಾರನ್ನು ಹೆದರಿಸುತ್ತಾರೆ ?

ಉಪಾಧ್ಯಕ್ಷರು.—ಈ ಪ್ರಶ್ನೆಯನ್ನು ಮುಂದಕ್ಕೆ ಹಾಕಬಹುದೇ ?

ಶ್ರೀ ಜಿ. ಎಂ. ಕಾನಡೆ.—ಬೇಕಾಗಿಲ್ಲ, ಈಗಾಗಲೇ ಇದನ್ನು ಹತ್ತನೇ ಸಲ ಮುಂದಕ್ಕೆ ಹಾಕಿದ್ದು ಕೋಟಿಗಟ್ಟಲೆ ಬಾಕಿ ಇರುವವರ ಹೆಸರುಗಳನ್ನು ಅವರು ಹೇಳಬೇಕು.

ಶ್ರೀ ಲಕ್ಷ್ಮೀನರಸಿಂಹಯ್ಯ.—ಆಂಧ್ರ ಸ್ಟೀಲ್‌ನವರದ್ದು ೪೪,೨೮,೦೬೯ ರೂ. ಬಾಕಿ ಇದೆ. ಟಿಕ್‌ಮೋನಿ ಸ್ಟೀಲ್ ಕಂಪನಿಯವರದ್ದು ೪೨,೪೮,೪೫೮ ರೂ. ಬಾಕಿ ಇದೆ. ಮೆಸರ್ಸ್ ಕ್ಲಾಪ್ ಸ್ಟೀಲ್‌ನವರದ್ದು ೧೪,೧೨,೦೦೦ ರೂಪಾಯಿಗಳ ಬಾಕಿ ಇದೆ. ಮೆಸರ್ಸ್ ಕೆ. ಆರ್. ಮಿಲ್ಸ್‌ನವರದ್ದು ೪೨,೮೩,೯೯೬ ರೂಪಾಯಿಗಳು ಬಾಕಿ ಇದೆ. ಮೆಸರ್ಸ್ ಎಂ.ಸಿ.ಎಫ್.ನವರದ್ದು ೧,೫೩,೫೫೫.೫೫ ರೂಪಾಯಿಗಳ ಬಾಕಿ ಇದೆ. ಮೈಸೂರು ಸಿಮೆಂಟ್ಸ್ ಲಿ.ನವರದ್ದು ೧,೭೩,೭೧೪ ರೂಪಾಯಿಗಳ

ಬಾಕಿ ಇದೆ. ಆಮೇಲೆ ಶಿವಮೊಗ್ಗ ಸ್ಟೀಲ್ ಲಿಮಿಟೆಡ್ ೩೫ ಲಕ್ಷ ಬಾಕಿ ಇದೆ.

ಉಪಾಧ್ಯಕ್ಷರು.—ಸಚಿವರೇ, ನಾಳೆ ಉತ್ತರಿಸುತ್ತೀರಾ ?

ಶ್ರೀ ಗೋಪಾಲ ಮುಕುಂದ ಕಾನಡೆ.—ನಾಳೆ ಅಂದರೆ ಮನೆ ಹಾಳಾಗುತ್ತದೆ.

ಉಪಾಧ್ಯಕ್ಷರು.—ನೀವೂ ಕೂಡ ಡಿಕ್ಟೇಟ್ ಮಾಡಬೇಡಿ. ನಾಳೆ ಮುಂದೂಡೋಣ ಬಿಡಿ. ಮುಂದಿನ ಕೊಶ್ಚನ್‌ಗೆ ಹೋಗೋಣ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಅಧ್ಯಕ್ಷರೇ.....

ಉಪಾಧ್ಯಕ್ಷರು.—ಮಾನ್ಯ ಸಚಿವರೇ, ಇದನ್ನು ನಾಳೆಗೆ ಮುಂದೂಡೋಣ ಬಿಡಿ.

ಶ್ರೀ ಗೋಪಾಲ ಮುಕುಂದ ಕಾನಡೆ.—೩ ಕೋಟಿ ಬಾಕಿ ಇರುವವರ ಹೆಸರುಗಳನ್ನು ಹೇಳಿ

ಉಪಾಧ್ಯಕ್ಷರು.—ನಾಳೆ ಹೇಳುತ್ತಾರೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ನಾಳೆ ಹೇಳುವುದಕ್ಕಾಗುವುದಿಲ್ಲ. ನಾಳೆ ನಾಳೆ ಎಂದು ಇವತ್ತು ಬಂದಿದೆ, ಲಾಸ್ಟ್ ಡೇಟ್ ಆದಮೇಲೆ ಬಂದಿದೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಜಿಂದಾಲ್‌ದು ೩ ಕೋಟಿ ೨೫ ಲಕ್ಷ ಇದೆ. ಮತ್ತೆ ಬಾಗಲಕೋಟೆ ಉದ್ಯೋಗ್ ಲಿಮಿಟೆಡ್‌ದು ೨೧ ಲಕ್ಷ ಇದೆ. ಆಮೇಲೆ ಸ್ಕೆಯರ್ ಪ್ರೈವೇಟ್ ಲಿಮಿಟೆಡ್‌ದು ೩ ಕೋಟಿ ೨೦ ಲಕ್ಷ ೨೯ ಸಾವಿರ ಇದೆ, ಎಂ.ವೈ. ಫೋರ್ಜಡೆಯವರದು. ತುಂಗಭದ್ರ ಫೈಬರ್ಸ್ ೧ ಕೋಟಿ ೩೦ ಲಕ್ಷ ೯೦ ಸಾವಿರ ಇದೆ. ಆ ಮೇಲೆ ವಿ. ಐ. ಎಸ್.ಎಲ್ ಬಾಕಿ ಇದೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ಅಧ್ಯಕ್ಷರೆ.....

ಉಪಾಧ್ಯಕ್ಷರು.—ಈಗಾಗಲೇ ೧೫ ನಿಮಿಷ ತೆಗೆದುಕೊಂಡಿದೆ ಈ ಒಂದು ಪ್ರಶ್ನೆಗೆ ಇನೂ ಬಹಳಷ್ಟು ಕೊಶ್ಚನ್ಸ್ ಇವೆ ಹೀಗಾದರೆ ಅದನ್ನು ಲ್ಯಾಪ್ಸ್ ಮಾಡಬೇಕಾಗುತ್ತದೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ಇದು ಒಂದೇ ಒಂದು ಫ್ಯಾಕ್ಟರಿಯವರು ಕೊಡುವ ದುಡ್ಡನ್ನು ಕೊಟ್ಟರೆ ನಮ್ಮ ಹರಿಜನರಿಗೆ ಭಾಗ್ಯ ಜ್ಯೋತಿಯ ಬಿಲ್ ತುಂಬಹುದು.

ಒಬ್ಬ ಮಾನ್ಯ ಸದಸ್ಯರು.—ಫೋರ್ಜಡೆಯವರಿಗೆ ಕೊಡಲಿಕ್ಕೆ ಹೇಳಿ.

ಶ್ರೀ ಗೋಪಾಲ ಮುಕುಂದ ಕಾನಡೆ.—ನನ್ನ ಪ್ರಶ್ನೆ ಇಷ್ಟು, ಅವರಿಗೆ ದುಡ್ಡನ್ನು ಕೊಡಲಿಕ್ಕೆ ೮೭ರಲ್ಲಿ ನೋಟೀಸ್ ಕೊಟ್ಟಿದ್ದೀರಿ, ಇಲ್ಲಿಗೆ ೯ ತಿಂಗಳಾಯಿತು. ಅದರ ನಂತರ ಎಷ್ಟು ಹಣ ತುಂಬಿದ್ದಾರೆ? ಒಟ್ಟು ೨೭ ಕೋಟಿ ಡಿಲ್ಲರೆ ಆಗುತ್ತದೆ. ಇದಕ್ಕೆ ಅವರಿಂದ ಏನು ಬಾಂಡ್ ಬರೆಸಿಕೊಂಡಿದ್ದೀರಿ ? ಇವರ ಫ್ಯಾಕ್ಟರಿಗಳು ದಿವಾಳಿಯಾಗಿವೆ. ಇವರಿಗೆ ಮತ್ತೆ ಜಾಸ್ತಿ ಕರೆಂಟ್ ಕೊಟ್ಟಿದ್ದೀರಾ ? ಬಡವರು ೫ ರೂಪಾಯಿ ಕೊಡದೇ ಹೋದರೆ ಫ್ಯೂಸ್ ತೆಗೆಯುತ್ತೀರಲ್ಲ, ಇವರಿಗೆ ಫ್ಯೂಸ್ ತೆಗೆದಿದ್ದೀರಾ ಅಥವಾ ಅದನ್ನೇ ಮುಂದುವರಿಸಿಕೊಂಡು ಹೋಗಿದ್ದೀರೋ ಅಥವಾ ವಸೂಲು ಮಾಡುವುದಕ್ಕೆ ಏನು ಕಾರ್ಯಕ್ರಮ ಹಾಕಿದ್ದೀರಿ,ಈ ೯ ತಿಂಗಳಲ್ಲಿ ಎಷ್ಟು ಬಾಕಿ ವಸೂಲು ಮಾಡಿದ್ದೀರಿ ೩೦-೯-೮೭ರವರೆಗೆ ಅಂಕಿಸಂಖ್ಯೆ ಕೊಟ್ಟಿದ್ದೀರಿ ಈಗ ೮೮ನೇ ಇಸವಿ ೬ನೇ ತಿಂಗಳು, ಇಲ್ಲಿಯವರೆಗೆ ಎಷ್ಟು ವಸೂಲು ಮಾಡಿದ್ದೀರಿ ?

ಶ್ರೀ ಲಕ್ಷ್ಮೀನರಸಿಂಹಯ್ಯ.—ಮಾನ್ಯ ಅಧ್ಯಕ್ಷರೆ, ಈ ಮಂಡಲಿ ನಿಯಮ ಪ್ರಕಾರ ಅವರಿಗೆ ವಿದ್ಯುತ್ತನ್ನು ಸರಬರಾಜು ಮಾಡುತ್ತೇವೆ. ಮಂಡಲಿ ನಿಯಮ ಪ್ರಕಾರ ಅವರಿಂದ ಬಾಕಿ ವಸೂಲು ಮಾಡುವುದಕ್ಕೆ ವಿಶೇಷವಾದಂಥ ಪ್ರಯತ್ನವನ್ನು ನಾವು ಮಾಡುತ್ತೇವೆ. ಕೋರ್ಟಿನಿಂದ ಕೆಲವು ಸ್ಟೇ ಬರುತ್ತವೆ, ಕೆಲವು ಡಿಸ್ಪ್ಯೂಟ್ ರೈಸ್ ಆಗುತ್ತದೆ. ಒಂದೇಒಂದು ಡಿಸ್ಪ್ಯೂಟ್ ಹೇಳಿಂವುದಾದರೆ, ಆಂಧ್ರ ಸ್ಟೀಲ್‌ನವರಿಂದ ೫೦೦೦ ಮೆಗಾವ್ಯಾಟ್ಸ್‌ನ ಆಥವಾ ಕಿಲೊವಾಟ್ಸ್‌ನ ಎಷ್ಟೋ ಡಿಮ್ಯಾಂಡ್ ಇದೆ. ಇವರಿಗೆ ೮೦ ಪರ್ಸೆಂಟ್ ಪವರ್ ಕಟ್ ಮಾಡಿದಾಗ ಅವರು ಹೇಳುತ್ತಾರೆ. ನಮಗೆ ಮ್ಯಾಕ್ಸಿಮಮ್ ಚಾರ್ಜ್ ಮಾಡಿದ್ದೀರಿ, ಕೊಡುವುದಕ್ಕಾಗುವುದಿಲ್ಲ, ೮೦ ಪರ್ಸೆಂಟ್ ಕಟ್ ಮಾಡಿದ್ದೀರಿ ಎಂದು. ಈ ರೀತಿ ಡಿಸ್ಪ್ಯೂಟ್ ರೈಸ್ ಆಗುತ್ತದೆ. ಕೆಲವು ಸಾರಿ ಡಿಸ್ಪ್ಯೂಟ್ ರೈಸ್ ಆದಾಗ ನಾವು ಅವರಿಗೆ ಸ್ವಲ್ಪ ಟೈಂ ಕೊಟ್ಟು ವಿವಾದ ಬಗೆಹರಿಸಿಕೊಳ್ಳಬೇಕಾದ ಪರಿಸ್ಥಿತಿ ಬೇಕಾದಷ್ಟು ಸಲ ಬರುತ್ತದೆ. ಇನ್ನು ಕೆಲವರು ಇದೇ ಕಾರಣದಿಂದ ಕೋರ್ಟಿಗೆ ಹೋಗುತ್ತಾರೆ, ಡಿಸ್‌ಕನೆಕ್ಟ್ ಮಾಡಕೂಡದು ಎಂದು ಹೇಳುತ್ತಾರೆ. ಮಾನ್ಯ ಕಾನಡೆಯವರಿಗೆ ಇಷ್ಟೊಂದು ಆಸಕ್ತಿ ಇದೆ. ಭಾಗ್ಯಜ್ಯೋತಿಯಲ್ಲಿ ೫ ರೂಪಾಯಿ ಕೊಡದೇ ಹೋದರೆ ಡಿಸ್‌ಕನೆಕ್ಟ್ ಮಾಡುತ್ತೀರ ಎಂದು ಹೇಳಿದ್ದಾರೆ. ಭಾಗ್ಯಜ್ಯೋತಿಯಲ್ಲಿ ಈ ರೀತಿ ಯಾವುದೆ ಡಿಸ್‌ಕನೆಕ್ಟ್ ಮಾಡಬಾರದು ಎನ್ನುತಕ್ಕಂಥ ಆದೇಶ ಕೊಟ್ಟಿದ್ದೇವೆ, ಆಕಸ್ಮಾತ್ ಡಿಸ್‌ಕನೆಕ್ಟ್

ಆಗಿದ್ದರೆ ಕೇವಲ ೧೦ ರೂಪಾಯಿ ಕೊಟ್ಟರೂ ರೀಕನೆಕ್ಷನ್ ಮಾಡಬೇಕು ಎನ್ನತಕ್ಕಂಥ ಆದೇಶ ಕೊಟ್ಟಿದ್ದೇವೆ. ನಾವು ಬಡವರ ಬಗ್ಗೆ ಅವರಿಗಿಂತ ಹೆಚ್ಚಿಗೆ ಕಳಕಳಿ ಹೊಂದಿದ್ದೇವೆ. ಭಾಗ್ಯದ ಜೋತಿ. ಹೆಸರಿಗೆತಕ್ಕಂತೆ ಆರು ಭಾಗ್ಯದಜ್ಯೋತಿ. ಅದನ್ನು ಕೊಟ್ಟಿದ್ದೇವೆ. ಅದನ್ನು ಕೊಟ್ಟಿದ್ದೇವೆ. ಅದನ್ನು ಡಿಸ್ಕನೆಕ್ಟ್ ಮಾಡಬಾರದೆಂದು ಹೇಳಿದ್ದೇವೆ. ಮಾನ್ಯ ಸಚಿವರಾದ ಜೆ. ಹೆಚ್. ಪಟೇಲ್ ಅವರು ಮೊನ್ನೆ ಜಿಲ್ಲಾ ಪರಿಷತ್‌ನವರ ಜೊತೆಯಲ್ಲಿ ಮಾತನಾಡಿ ಬಾಕಿ ಇರುವುದನ್ನು ವೇವ್ ಮಾಡುವುದಕ್ಕೂ ಪ್ರಯತ್ನ ಮಾಡುತ್ತೇವೆ ಎನ್ನತಕ್ಕಂಥ ಭರವಸೆಯನ್ನು ಕೊಟ್ಟಿದ್ದಾರೆ. ಇವರು ಕೊಡುವುದು ಕೇವಲ ೧೦ ಪೈಸೆ ೧೨ ಪೈಸೆ ಪರ್ ಯೂನಿಟ್ ರಿಟರ್ನ್‌ಬರುತ್ತದೆ, ಅವರು ಒಂದು ರೂಪಾಯಿಗಿಂತ ಹೆಚ್ಚಿಗೆ ಕೊಡತಕ್ಕಂಥ ಹಣ. ಅವರು ಕೊಡತಕ್ಕಂಥ ಹಣದಿಂದ ಮಂಡಲಿ ಬೆಳೆಯಬೇಕಾಗುತ್ತದೆ. ಪಂಪ್ ಸೆಟ್ಸ್ ಸ್ಟ್ರೀಟ್ ಲೈಟ್ಸ್ ಆಥವಾ ಬೇರೆಯವರಿಂದ ರಿಟರ್ನ್ ಏನೂ ಬರುವುದಿಲ್ಲ, ನಮಗೆ ಲಾಸ್ ಆಗುತ್ತದೆ. ೧೪ ಪೈಸೆ ಕಾಸ್ಟ್ ಬೀಳುತ್ತದೆ, ಆಪರೇಷನ್ ಅಂಡ್ ಮೇಂಟನೆನ್ಸ್‌ಗೆ. ಅವರಿಂದ ರಿಟರ್ನ್ ೧೨ ಪೈಸೆ ಬರುತ್ತದೆ. ಅದಕ್ಕೋಸ್ಕರ ಬೋರ್ಡ್ ಉಳಿಯುಕೊಂಡು ಹೋಗಬೇಕಾದರೆ ಅವರಿಗೆ ಹೆಚ್ಚಿಗೆ ಕರೆಂಟ್ ಸಪ್ಲೈಮಾಡಿ ಅವರಿಂದ ಹಣ ಪಡೆದುಕೊಳ್ಳುವುದು ಬಹಳ ಮುಖ್ಯ. ಬೋರ್ಡ್ ಉಳಿಯಬೇಕಾದರೆ ಇದೆಲ್ಲಾ ಆಗೇಆಗುತ್ತದೆ.

ಶ್ರೀ ಗೋಪಾಲ ಮಾಕುಂದ ಕಾನಡೆ.—ಮಂಡಳಿಯವರು ಕೋಟಿಗಟ್ಟಲೆ ಹಣವನ್ನು ವಸೂಲು ಮಾಡುವುದರಲ್ಲಿ ತಾರತಮ್ಯ ನಡೆಸುತ್ತಿದ್ದಾರೆ. ಆದರೆ ಕರ್ನಾಟಕ ರಾಜ್ಯದಲ್ಲಿ ಬಡವರಿಗೆ ಹಾಕಿರತಕ್ಕ ಭಾಗ್ಯಜ್ಯೋತಿ ಮನೆಗಳವರು ೫ ರೂಪಾಯಿ ಹಣ ಕಟ್ಟದಿದ್ದರೆ ಅವರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಾರೆ. ಬಡವರ ಬಗ್ಗೆ ನಿಮಗೆ ಕನಿಕರ ಇಲ್ಲವೇ ?

ಶ್ರೀ ಲಕ್ಷ್ಮೀನರಸಿಂಯ್ಯ.—ಕನಿಕರ ಇಲ್ಲ ಎನ್ನುವುದು ಮುಖ್ಯವಲ್ಲ. ರಿಯಾಯಿತಿ ಮತ್ತು ಸಬ್ಸಿಡಿ ಪಜಾ ಮಾಡುವುದಕ್ಕೆ ಬದಲು ಅವರವರ ಭಾರವನ್ನು ತುಂಬತಕ್ಕ ಶಕ್ತಿಯನ್ನು ಅವರಿಗೆ ಕೊಡ ಬೇಕು. ಸಂಪೂರ್ಣವಾಗಿ ಎಲ್ಲವನ್ನು ಪುಗ್‌ಸಟ್ಟಿ ಕೊಡುತ್ತೇವೆಂದರೆ ಯಾರೂ ಸಂಪಾದನೆ ಮಾಡುವುದಿಲ್ಲ. ಆದ್ದರಿಂದ ಆ ರೀತಿ ಮಾಡಬಾರದು.

ಪ್ರಶ್ನೆ ಸಂಖ್ಯೆ:೮೮೫(೨೬೭ ಸದಸ್ಯರು ಗೈರು ಹಾಜರಿ)

ಕೇರಳಕ್ಕೆ ಅರಣ್ಯ ಸಂಪತ್ತಿನ ಕಳ್ಳ ಸಾಗಾಣಿಕೆ

೮೮೬ (೨೬೧೫) ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ದಕ್ಷಿಣ ಕನ್ನಡ ಗಿಡಗಳಿಂದ ಕೇರಳಕ್ಕೆ ಗಂಧ ಬೀಟೆ ಸಾದುವಾನಿಯಂತಹ ಅರಣ್ಯ ಸಂಪತ್ತು ಕಳ್ಳ ಸಾಗಾಣಿಕೆಯಾಗಿ ೧೯೮೫-೮೬, ೧೯೮೬-೮೭ನೇ ಡಿಸೆಂಬರ್‌ವರೆಗೆ ಪತ್ತೆ ಹಚ್ಚಲಾದ ಪ್ರಕರಣ ಗಳೆಷ್ಟು ?

ಆ) ಈ ಬಗ್ಗೆ ಎಷ್ಟು ದಾವೆಗಳನ್ನು ಹಾಕಲಾಗಿದೆ ? ಎಷ್ಟು ಕ್ರಯದ ಮಾಲು ಸ್ವಾಧೀನ ಪಾಗಿದೆ ? ಎಷ್ಟು ಜನರಿಗೆ ಶಿಕ್ಷೆ ಹಾಗೂ ದಂಡ ವಿಧಿಸಲಾಗಿದೆ ?

ಇ) ಈ ರೀತಿ ಅರಣ್ಯ ಸಂಪತ್ತು ನಾಶವಾಗದಂತೆ ಹೆಚ್ಚಿನ ಹೊಸ ಕ್ರಮಗಳನ್ನು ತೆಗೆದು ಕೊಳ್ಳಲು ಉದ್ದೇಶಿಸಲಾಗಿದೆಯೇ ?

ಶ್ರೀ ಜಿ. ಎಸ್. ಬಾಗಲಕೋಟೆ (ಅರಣ್ಯ ರಾಜ್ಯಮಂತ್ರಿಗಳು).—

ಅ) ೧೯೮೫-೮೬ ಮತ್ತು ೮೬-೮೭ರ ಆಕ್ಟೋಬರವರೆಗೆ ಮಂಗಳೂರು ಅರಣ್ಯ ವಿಭಾಗದಲ್ಲಿ ಪತ್ತೆ ಹಚ್ಚಲಾದ ಕಳ್ಳ ಸಾಗಾಣಿಕೆಯ ಪ್ರಕರಣಗಳ ವಿವರ ಈ ಕೆಳಗಿನಂತಿದೆ: